# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 435 |
| ಮಾನ್ಯ ಸದಸ್ಯರ ಹೆಸರು | ಶ್ರೀ ಐವನ್ ಡಿ' ಸೋಜಾ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19/07/2024 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಬೀಡಿಕಾರ್ಮಿಕರ ಸಂಖ್ಯೆ ಎಷ್ಟು; ಯಾವ ಯಾವ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರು ಇದ್ದಾರೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಇಲಾಖೆ ವತಿಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ ನಿಖರವಾದ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ ಬೀಡಿ ಮತ್ತು ಸಿಗಾರ್ ಕಾರ್ಯ್ಯಯಡಿ ಸಂಸ್ಥೆಗಳ ನೋಂದಣಿಗೆ/ ನವೀಕರಣ ಸಂದರ್ಭದಲ್ಲಿ ನೀಡಿದ ಮಾಹಿತಿಯ ಸಂಖ್ಯೆ ಹಾಗೂ ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿಸಲಾದ ಬೀಡಿ ಕಾರ್ಮಿಕರ ಸಂಖ್ಯೆ ವಿವರ ಈ ಕೆಳಕಂಡಂತಿದೆ.<br><br>ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಒಟ್ಟು ಸಂಖ್ಯೆ **2,47,813** ಹಾಗೂ ರಾಷ್ಟ್ರೀಯ ಅಸಂಘಟಿತ ಕಾರ್ಮಿಕರ ದತ್ತಾಂಶ ಸಂಗ್ರಹಣೆಯ ಉದ್ದೇಶದಿಂದ ಜಾರಿಗೆ ತಂದ ಕೇಂದ್ರ ಸರ್ಕಾರದ ಇ-ಶ್ರಮ್ ಪೋರ್ಟಲ್‌ನಲ್ಲಿ ಈವರೆಗೆ ರಾಜ್ಯಾದ್ಯಂತ **1,05,874** ಬೀಡಿ ಕಾರ್ಮಿಕರು ನೋಂದಣಿಯಾಗಿದ್ದು, ಅಂಕಿ ಅಂಶಗಳ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ) | ಬೀಡಿ ಕಾರ್ಮಿಕರ ಸ್ಥಿತಿಗತಿಯನ್ನು ತಿಳಿಯಲು ಹಾಗೂ ಅವರ ಮಕ್ಕಳಿಗೆ ಶಿಕ್ಷಣ ಒದಗಿಸಲು ಸರ್ಕಾರ ಕೈಗೊಂಡಕ್ರಮಗಳೇನು (ವಿವರ ನೀಡುವುದು) | ಬೀಡಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಹಕ್ಕು ಕಾಯಿದೆ 2009 ರ ಮಾನದಂಡಗಳಿಗೊಳಪಟ್ಟು ಬೀಡಿ ಕಾರ್ಮಿಕರ ಅರ್ಹ ಮಕ್ಕಳಿಗೂ ಶಿಕ್ಷಣ ಒದಗಿಸಲಾಗುತ್ತಿದೆ. ಆದರೆ ಬೀಡಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಒದಗಿಸುವ ಸಂಬಂಧ ರಾಜ್ಯ ಕಾರ್ಮಿಕ ಇಲಾಖೆ ವತಿಯಿಂದ ಯಾವುದೇ ಯೋಜನೆ ಜಾರಿಯಲ್ಲಿರುವುದಿಲ್ಲ. |
| ಇ) | ಬೀಡಿ ಕಾರ್ಮಿಕರು ನಶಿಸಿ ಹೋಗುವ ಹಂತದಲ್ಲಿದ್ದು, ಈ ಕಾರ್ಮಿಕರಿಗೆ ಪುನರ್ ಉದ್ಯೋಗ ಕಲ್ಪಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; (ವಿವರ ನೀಡುವುದು) | ಬೀಡಿ ಕಾರ್ಮಿಕರಿಗೆ ಪುನರ್ ಉದ್ಯೋಗ ಕಲ್ಪಿಸಲು ರಾಜ್ಯ ಕಾರ್ಮಿಕ ಇಲಾಖೆಯ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| ಈ) | ಬೀಡಿ ಉದ್ದಿಮೆಯು ಗುಡಿ ಕೈಗಾರಿಕೆ ಉದ್ದಿಮೆಯಾಗಿದ್ದು, ಬೀಡಿ ಕಟ್ಟುವುದರಿಂದ ಉಂಟಾಗುವ ರೋಗಗಳನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?<br>(ವಿವರ ನೀಡುವುದು) | ರಾಜ್ಯ ಕಾರ್ಮಿಕ ಇಲಾಖೆ ವತಿಯಿಂದ ಬೀಡಿ ಕಾರ್ಮಿಕರಿಗೆ ರೋಗಗಳನ್ನು ತಡೆಯಲು ಪ್ರತ್ಯೇಕವಾಗಿ ಯಾವುದೇ ಕ್ರಮಗಳು ಇರುವುದಿಲ್ಲ. ಆದರೆ, ಕೇಂದ್ರ ಕಾರ್ಮಿಕ ಇಲಾಖೆ ವ್ಯಾಪ್ತಿಗೆ ಬರುವ ಸೆಂಟ್ರಲ್ ವೆಲ್ ಫೇರ್ ಆರ್ಗನೈಸೇಷನ್ ರಾಜ್ಯದಲ್ಲಿ ಬೀಡಿ ಕಾರ್ಮಿಕರು ಹೆಚ್ಚಾಗಿರುವ ಕಡೆಗಳಲ್ಲಿ 28 ಡಿಸ್ಪೆನ್ಸರಿಗಳನ್ನು ಹಾಗೂ ಮೈಸೂರು ಮತ್ತು ಯಾದಗಿರಿಯಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಿದ್ದು, ಆ ಮೂಲಕ ಬೀಡಿ ಕಾರ್ಮಿಕರು ಖಾಯಿಲೆಗೊಳಗಾದಾಗ ಚಿಕಿತ್ಸೆ ನೀಡಲಾಗುತ್ತಿದೆ. |

**ಕಾಇ 288 ಎಲ್ಇಟಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 435 (388) ಕ್ಕೆ ಅನುಬಂಧ**

| ಕ್ರಮ ಸಂಖ್ಯೆ | ಜಿಲ್ಲೆ | ಬೀಡಿ ಮತ್ತು ಸಿಗಾರ್ ಕಾಯ್ದೆಯಡಿ ಸಂಸ್ಥೆಗಳಲ್ಲಿ ನೋಂದಣಿಯಾದ ಕಾರ್ಮಿಕರ ಸಂಖ್ಯೆ | ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಯಾದ ಕಾರ್ಮಿಕರ ಸಂಖ್ಯೆ |
|---|---|---|---|
| 1. | ರಾಮನಗರ | 510 | 4038 |
| 2. | ತುಮಕೂರು | 2068 | 19921 |
| 3. | ಮೈಸೂರು | 4038 | 7590 |
| 4. | ಮಂಡ್ಯ | 1292 | 3321 |
| 5. | ಚಾಮರಾಜನಗರ | 1315 | 4013 |
| 6. | ಚಿಕ್ಕಬಳ್ಳಾಪುರ | 42 | 904 |
| 7. | ಕೋಲಾರ | 175 | 5065 |
| 8. | ದಕ್ಷಿಣಕನ್ನಡ | 193959 | 26020 |
| 9. | ಉಡುಪಿ | 38716 | 5229 |
| 10. | ಬೆಳಗಾವಿ | 148 | 1697 |
| 11. | ಧಾರವಾಡ | 506 | 2681 |
| 12. | ಹಾವೇರಿ | 945 | 6406 |
| 13. | ಯಾದಗಿರಿ | 100 | 2613 |
| 14. | ದಾವಣಗೆರೆ | 3999 | 6873 |
| 15. | ಬೆಂಗಳೂರುನಗರ | - | 1274 |
| 16. | ಬೆಂಗಳೂರುಗ್ರಾಮಾಂತರ | - | 733 |
| 17. | ಕೊಡಗು | - | 55 |
| 18. | ಚಿಕ್ಕಮಗಳೂರು | - | 357 |
| 19. | ಹಾಸನ | - | 210 |
| 20. | ಶಿವಮೊಗ್ಗ | - | 861 |
| 21. | ಬಾಗಲಕೋಟೆ | - | 253 |
| 22. | ವಿಜಯಪುರ | - | 47 |
| 23. | ಗದಗ | - | 522 |
| 24. | ಕಾರವಾರ | - | 87 |
| 25. | ಕಲಬುರಗಿ | - | 102 |
| 26. | ಬೀದರ್ | - | 23 |
| 27. | ಕೊಪ್ಪಳ | - | 234 |
| 28. | ರಾಯಚೂರು | - | 27 |
| 29. | ಬಳ್ಳಾರಿ | - | 2858 |
| 30. | ವಿಜಯನಗರ | - | 685 |
| 31. | ಚಿತ್ರದುರ್ಗ | - | 1175 |
| | **ಒಟ್ಟು** | **2,47,813** | **1,05,874** |